

بسم اللهِ الرّحمٰن الرحیم

# ಜಲ್ಸಾ ಸಾಲಾನ ಯು.ಕೆ. 2023: ಅವಲೋಕನ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **11-08-2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಅಲ್ಲಾಹನ ವಾಗ್ದಾನಗಳ ಪ್ರಕಾರ ಹಝ್ರತ್ ಪೈಗಂಬರ್(ಸ)ರ ಸತ್ಯಪ್ರೇಮಿಯಾದ ದಾಸ ಹಝ್ರತ್ ಮಸೀಹ್ ಮೌಊದ್(ರ)ರ ಜಮಾಅತಿನ ಮೇಲೆ ಪ್ರತಿದಿನ ಅಲ್ಲಾಹನ ಅನುಗ್ರಹಗಳ ಮಳೆ ವರ್ಷಿಸುತ್ತದೆ. ಅದರ ಪ್ರಸ್ತಾಪ ಜಲ್ಸದ ರಿಪೋರ್ಟಿನಲ್ಲಿ ಆಗುತ್ತದೆ. ಆದರೆ ಪರಿಮಿತವಾದ ಸಮಯದಲ್ಲಿ ಎಲ್ಲವನ್ನು ಹೇಳಲು ಸಾಧ್ಯವಾಗುವುದಿಲ್ಲ. ಅವುಗಳಲ್ಲಿ ಕೆಲವನ್ನು ಇಂದು ಸಹ ನಾನು ಪ್ರಸ್ತಾಪಿಸುತ್ತೇನೆ.

ಕನ್ನಾಸದ ಲೋಕಲ್ ಮಿಶನರಿಯಾದ ಹಮೀದ್ ಸಾಹಿಬ್‌ರು ಬರೆಯುತ್ತಾರೆ: ವೀರಾ ಪಟ್ಟಣದಲ್ಲಿ ನಮ್ಮ ರೇಡಿಯೋ ಕಾರ್ಯಕ್ರಮವನ್ನು ಆಲಿಸಿಕೊಂಡು ಪ್ರಾದೇಶಿಕ ಮಸೀದಿಯ ಇಮಾಮರಾದ ಈಸಾ ಸಾಹಿಬ್‌ರು ಜಮಾಅತನ್ನು ಸಂಪರ್ಕಿಸಿ ಮಿಶನ್ ಹೌಸಿಗೆ ಬಂದರು. ಅವರು ಜಮಾಅತಿನ ಸಂದೇಶವನ್ನು ಮನವರಿಕೆ ಮಾಡಿಕೊಂಡು ಬೈಅತ್ ಮಾಡಿದರು. ಅನಂತರ ಅವರು ತಮ್ಮ ಊರಿಗೆ ಹೋಗಿ ತಬ್ಲೀಗ್ ಮಾಡಿದರು ಮತ್ತು 24 ವ್ಯಕ್ತಿಗಳು ಅಹ್ಮದಿಯ್ಯತ್ತಿನಲ್ಲಿ ಪ್ರವೇಶಿಸಿದರು. ಅನಂತರ ನಮ್ಮ ಮುಬಲ್ಲಿಗ್ ಆ ಗ್ರಾಮಕ್ಕೆ ಭೇಟಿ ನೀಡಿದರು. ಮತ್ತೂ 8 ವ್ಯಕ್ತಿಗಳು ಜಮಾಅತಿನಲ್ಲಿ ಪ್ರವೇಶಿಸಿದರು. ಹೀಗೆ ಅಲ್ಲಿ ಹೊಸ ಜಮಾಅತ್ ಸ್ಥಾಪಿತಗೊಂಡಿತು.

ಕನ್ನಾಸದ ಒಂದು ರಾಜ್ಯವಾದ ಮಾಯೀನ್ ದೂಂಬೆಯ ಒಂದು ಗ್ರಾಮಕ್ಕೆ ಮುಅಲ್ಲಿಂ ಉಮರ್ ಮುನವ್ವರ್ ಸಾಹಿಬ್‌ರನ್ನು ತಬ್ಲೀಗಿಗಾಗಿ ಕಳುಹಿಸಲಾಯಿತು. ಅಲ್ಲಿ ಅವರು ಪಂಫ್ಲೆಟ್‌ಗಳನ್ನು ವಿತರಣೆ ಮಾಡಿದರು. ಆ ವೇಳೆ ಕೆಲವು ಕಿಡಿಗೇಡಿಗಳು ಕಲ್ಲು ತೂರಾಟ ಮಾಡಿ ಗದ್ದಲವೆಬ್ಬಿಸಿದರು. ಕಲ್ಲೆಸೆತಗಳಿಂದ ತಪ್ಪಿಸಿ ಕೊಳ್ಳುತ್ತಾ ಮುಅಲ್ಲಿಂ ಸಾಹಿಬ್‌ರು ತಬ್ಲೀಗ್ ಮಾಡುತ್ತಾ ಇದ್ದರು. ಜನರು ಅವರ ಸಹನೆ ಮತ್ತು ತಾಳ್ಮೆಯಿಂದ ಬಹಳ ಪ್ರಭಾವಿತ ಗೊಂಡರು. ಅಲ್ಲಿಯ ಮಸೀದಿಗೆ ಹೋಗಿ ಅವರು ಜನರ ಪ್ರಶ್ನೆಗಳಿಗೆ ತೃಪ್ತಿಕರವಾದ ಉತ್ತರಗಳನ್ನು ನೀಡಿದರು. ನಲ್ವತ್ತು ನಲ್ವತ್ತೆರಡು ಜನರು ಜಮಾಅತಿನ ತಬ್ಲೀಗಿನಿಂದ ಪ್ರಭಾವಿತರಾಗಿ ಬೈಅತ್ ಮಾಡಿದರು. ಹಾಗೆ ಅಲ್ಲಿ ಹೊಸ ಜಮಾಅತ್ ಸ್ಥಾಪನೆಗೊಂಡಿತು.

ಗಿನಿಬಸಾವಿನ ಇಮಾಂ ತಮಾನೆ ಹೇಳುತ್ತಾರೆ: ನೀವು ಹಝ್ರತ್ ಪೈಗಂಬರ್(ಸ), ಪವಿತ್ರ ಖುರ್‌ಆನ್ ಮತ್ತು ಹದೀಸನ್ನು ನಂಬುವುದಿಲ್ಲವೆಂದೇ ಇಂದಿನ ತನಕ ನಾವು ನಿಮ್ಮ ಜಮಾಅತಿನ ಕುರಿತು ಆಲಿಸುತ್ತಾ ಬಂದಿದ್ದೇವೆ. ಇಂದು ನಾವು ಜಲ್ಸದಲ್ಲಿ ನಿಮ್ಮ ಖಲೀಫರನ್ನು ಕಂಡೆವು ಮತ್ತು ಅವರ ಮಾತುಗಳನ್ನು ಆಲಿಸಿದೆವು. ಅವರು ಅಲ್ಲಾಹನ, ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರ, ಪವಿತ್ರ ಖುರ್‌ಆನಿನ ಮತ್ತು ಹದೀಸಿನ ಮೂಲಕ ಉಪದೇಶಗಳನ್ನು ನೀಡಿದರು. ಜಮಾಅತಿನ ವಿರುದ್ಧ ಸುಳ್ಳು ಪ್ರಚಾರ ನಡೆಯುತ್ತಿದೆ ಎಂದು ನನಗೆ ಖಚಿತವಾಯಿತು. ದೈವಿಕ ಜಮಾಅತಿನ ವಿರುದ್ಧ ಯಾವಾಗಲೂ ಸುಳ್ಳು ಪ್ರಚಾರ ನಡೆಯುತ್ತದೆ. ಆದ್ದರಿಂದ ನಾನು ಇಂದು ಅಹ್ಮದಿಯಾ ಜಮಾಅತಿನಲ್ಲಿ ಪ್ರವೇಶಿಸುತ್ತೇನೆ.

ನಮ್ಮ ಜಮಾಅತಿನ ಒಂದು ಮಸೀದಿಯನ್ನು ಮುಚ್ಚಿಸಲು ಬ್ರೋಂಡಿ ಎಂಬ ಪಟ್ಟಣದಲ್ಲಿ ಸುನ್ನಿ ಮಸೀದಿಯ ಇಮಾಮ್ ಬಹಳ ಪ್ರಯತ್ನ ಮಾಡಿದರು. ಆದರೆ ಅವರ ಪ್ರಯತ್ನಗಳೆಲ್ಲ ವಿಫಲಗೊಂಡುವು. ನಮ್ಮ ಮುಅಲ್ಲಿಂ ಸಾಹಿಬ್‌ರನ್ನು ಕರೆದರು ಈಸಾ ಮಸೀಹರ ಮರಣದ ವಿಷಯದಲ್ಲಿ ಚರ್ಚೆ ನಡೆಸಲಾಯಿತು. ನಮ್ಮ ಮುಅಲ್ಲಿಂ ಸಾಹಿಬರು ನೀಡಿದ ಪುರಾವೆಗಳಿಗೆ ಉತ್ತರ ನೀಡಲು ಇಮಾಂ ಸಾಹಿಬ್‌ರಿಗೆ ಸಾಧ್ಯವಾಗಲಿಲ್ಲ. ಅವರು ಜಮಾಅತಿನ ಮೇಲೆ ಕುಫ್ರಿನ ಫತ್ವಾ ಹೊರಡಿಸಿದರು. ಅವರಿಂದಲೇ ಒಬ್ಬ ವ್ಯಕ್ತಿ ಹೇಳಿದರು: ಜಮಾಅತ್ ವಿವರಿಸುತ್ತಿರುವ ಇಸ್ಲಾಂ ಮನವರಿಕೆಯಾಗುತ್ತದೆ. ಆದರೆ ನಿಮ್ಮದು ಗೊತ್ತಾಗುತ್ತಿಲ್ಲ. ಹಾಗೆ ಅವರ ನಡುವೆ ಪರಸ್ಪರ ಜಗಳ ಉಂಟಾಯಿತು ಮತ್ತು ಸರಕಾರ ಮೂರು ತಿಂಗಳಿಗೆ ಅವರ ಮಸೀದಿಯನ್ನು ಮುಚ್ಚಿಸಿತು. ಅಹ್ಮದಿಯರ ಮಸೀದಿಗಳನ್ನು ಮುಚ್ಚಿಸಬೇಕು, ಮೀನಾರ್ ಮತ್ತು ಮಿಹ್‌ರಾಬನ್ನು ಕೆಡವಿ ಹಾಕಬೇಕು ಎಂಬುದಾಗಿ ಪಾಕಿಸ್ತಾನದ ನಾಮಧಾರಿ ಮುಲ್ಲಾಗಳು ಹೇಳುವ ರೀತಿಯನ್ನು ಈಗ ಎಲ್ಲೆಡೆ ಗುಲ್ಲೆಬ್ಬಿಸಲಾಗುತ್ತಿದೆ. ಆದರೆ ಅಹ್ಮದಿಯರಿಗೆ ಮೀನಾರನ್ನು ಮಾಡಲು ಅನುಮತಿ ಇಲ್ಲವೆಂದು ಪಾಕಿಸ್ತಾನದ ಯಾವುದೇ ಕಾನೂನಿನಲ್ಲಿ ಬರೆಯಲಾಗಿಲ್ಲ. ಆದರೂ ಸರ್ಕಾರ ಈ ನಾಮಧಾರಿ ಮೌಲವಿಗಳ ಮುಂದೆ ಮೊಣಕಾಲನ್ನು ಮಡಚಲು ನಿರ್ಬಂಧಿತವಾಗಿದೆ. ಈ ಮೌಲವಿಗಳು ನಷ್ಟಗಳನ್ನು ಉಂಟುಮಾಡಲು ತಮ್ಮ ಪೂರ್ಣ ಪ್ರಯತ್ನವನ್ನು ಮಾಡುತ್ತಾರೆ. ಆದರೆ ಇನ್‌ಶಾ ಅಲ್ಲಾಹ್ ಒಂದು ದಿನ ಇವರೆಲ್ಲರೂ ಸ್ವತಃ ಸಾಯುವರು.

ಪಾಕಿಸ್ತಾನದಲ್ಲಿ ಪವಿತ್ರ ಖುರ್‌ಆನನ್ನು ನಾವು ಪ್ರಕಟಗೊಳಿಸುವುದನ್ನು ತಡೆಯಲಾಗಿದೆ. ಅದನ್ನು ತರ್ಜುಮೆ ಸಮೇತ ಪ್ರಕಾಶನಗೊಳಿಸುವುದರ ಪ್ರಶ್ನೆಯೇ ಉದಿಸುವುದಿಲ್ಲ. ಪವಿತ್ರ ಖುರ್‌ಆನ್ ಆಲಿಸಿದ್ದಕ್ಕೆ ಕೆಲವರ ಮೇಲೆ ಅಲ್ಲಿ ಮೊಕದ್ದಮೆ ಹೂಡಲಾಗಿದೆ. ಇದಾಗಿದೆ ನಾಮಧಾರಿ ಮುಸ್ಲಿಮರ ಇಸ್ಲಾಂ. ಇದಕ್ಕೆ ಎದುರಾಗಿ ಅಲ್ಲಾಹನು ನಮ್ಮ ಮಾರ್ಗಗಳನ್ನು ತೆರೆಯುತ್ತಿದ್ದಾನೆ. ತನ್ಝಾನಿಯದ ಒಬ್ಬ ಮುಅಲ್ಲಿಮ್ ಸಾಹಿಬ್‌ರು

ಹೇಳುತ್ತಾರೆ: ಮೂವತ್ತು ಕಿಲೋಮೀಟರ್ ದೂರದಿಂದ ಒಬ್ಬ ವ್ಯಕ್ತಿಯ ಫೋನ್ ಕರೆ ಬಂತು. ಅವರು ಪವಿತ್ರ ಖುರ್‌ಆನಿನ ಸ್ವಾಹಿಲಿ ತರ್ಜುಮೆ ಖರೀದಿ ಮಾಡಲು ಬಯಸುತ್ತಿದ್ದರು. ಅವರ ಪ್ರದೇಶದಲ್ಲಿ ಅದು ಲಭ್ಯವೆಂದು ಅವರೊಡನೆ ಹೇಳಲಾಯಿತು. ಆದರೆ ಅವರು ಹೇಳಿದರು: ನನಗೆ ಜಮಾಅತಿನ ತರ್ಜುಮೆ ಮತ್ತು ವ್ಯಾಖ್ಯಾನ ಇಷ್ಟ ನನಗೆ ಅದೇ ಬೇಕು.

ಪಶ್ಚಿಮದಲ್ಲಿ ಸ್ವೀಡನ್, ಡೆನ್ಮಾರ್ಕ್ ಮುಂತಾದ ಕೆಲವು ದೇಶಗಳಲ್ಲಿ ಪವಿತ್ರ ಖುರ್‌ಆನನ್ನು ಅಪಮಾನಿಸಲಾಗುತ್ತಿದೆ. ಆದರೆ ಅಲ್ಲಿ ಇಸ್ಲಾಮಿನ ಸುಂದರವಾದ ಪಾಠವನ್ನು ಮುಂದಿರಿಸಲಾಗುವಾಗ ವಿರೋಧಿಗಳ ವರ್ತನೆಗಳು ಬದಲಾಗುತ್ತವೆ. ಇಂದು ಅಹ್ಮದಿಯಾ ಜಮಾಅತ್ ಮಾತ್ರವೇ ಪವಿತ್ರ ಖುರ್‌ಆನಿನ ಸ್ಥಾನವನ್ನು ಎತ್ತಲು ಮತ್ತು ಅದರ ಅಧ್ಯಾಪನೆಗಳನ್ನು ಹರಡಲು ಪ್ರಯತ್ನಿಸುತ್ತಿದೆ.

ಪವಿತ್ರ ಖುರ್‌ಆನಿನ ಪ್ರಕಾಶನ ಮತ್ತು ಇಸ್ಲಾಮಿನ ಬೋಧನೆಗಳ ಕುರಿತು ಇರುವ ಸಾಹಿತ್ಯಗಳು ಜನರ ಮೇಲೆ ಹೇಗೆ ಪ್ರಭಾವ ಬೀರುತ್ತಿದೆ ಎಂಬುದರ ಕುರಿತು ಇನ್ನಷ್ಟು ಘಟನೆಗಳನ್ನು ಮುಂದಿರಿಸುತ್ತೇನೆ. ಗೋಲಾಘಾಟಿನ ಬುಕ್‌ಫೇರಿನ ವೇಳೆ ಓರ್ವ ಮುಸ್ಲಿಮ್ ಪ್ರೊಫೆಸ್ಸರ್ ಆದ ಶಬಾನ ಯಾಸ್ಮೀನ್ ಸಾಹಿಬ ನಮ್ಮ ಬುಕ್ ಸ್ಟಾಲನ್ನು ನೋಡಿದಾಗ ಬಹಳ ಸಂತೋಷಗೊಂಡರು ಮತ್ತು ನೇರವಾಗಿ ಬಂದು ಪವಿತ್ರ ಖುರ್‌ಆನಿನ ಆಸಾಮಿ ತರ್ಜುಮೆಯನ್ನು ಕೈಯಲ್ಲಿ ಎತ್ತಿದರು. ತನ್ನ ಜೊತೆಗೆ ಇದ್ದ ಪ್ರೊಫೆಸರ್ ಸಾಹಿಬ್‌ರೊಡನೆ ಇಂದು ನನ್ನ ಕನಸು ಈಡೇರಿದೆ ಎಂದು ಹೇಳಿದರು. ನಾನು ದೀರ್ಘಕಾಲದಿಂದ ಪವಿತ್ರ ಖುರ್‌ಆನಿನ ಆಸಾಮಿ ತರ್ಜುಮೆಯನ್ನು ಹುಡುಕುತ್ತಿದ್ದೆ. ಪವಿತ್ರ ಖುರ್‌ಆನಿನ ಆಸಾಮಿ ತರ್ಜುಮೆ ಬೇಕೆಂದು ನನ್ನ ಅಧ್ಯಾಪಕರೊಬ್ಬರು ಪದೇ ಪದೇ ನನ್ನೊಡನೆ ಹೇಳುತ್ತಿದ್ದರು. ಆದರೆ ನನ್ನ ಬಳಿ ಪವಿತ್ರ ಖುರ್‌ಆನಿನ ಆಸಾಮಿ ತರ್ಜುಮೆ ಇರದ ಕಾರಣದಿಂದ ಅವರಿಗೆ ಕೊಡಲಾಗಲಿಲ್ಲ. ಆದ್ದರಿಂದ ನನಗೆ ಬಹಳ ಲಜ್ಜೆಯಾಗುತ್ತಿತ್ತು. ಮುಸ್ಲಿಮಳಾಗಿದ್ದೇನೆ ಎಂಬುದರ ಬಗ್ಗೆ ಖೇದವಾಗುತ್ತಿತ್ತು. ನನ್ನ ಆ ಅಧ್ಯಾಪಕರ ನಿಧನದ ನಂತರ ಇಂದು ನನಗೆ ಈ ಪವಿತ್ರ ಖುರ್‌ಆನ್ ಲಭಿಸಿದೆ.

ಧೀಮಾಜಿ ಬುಕ್ ಫೇರಿಗೆ ಬಾನ್ತಿ ದೂಬಾರಾಸ್ ಎಂಬ ಹೆಸರಿನ ಹಿಂದು ಮಹಿಳೆಯೊಬ್ಬಳು ಬಂದಿದ್ದರು. ಇವರು ಲಾರ್ಡ್ ಶಿವನ ಮಂದಿರವನ್ನು ಕಟ್ಟುತ್ತಿದ್ದಾರೆ ಮತ್ತು ಅದರ ಪ್ರಚಾರ ನಡೆಸುತ್ತಿದ್ದಾರೆ. ಮುಸ್ಲಿಮರು ಬಹಳ ಕಡಿಮೆ ಸಂಖ್ಯೆಯಲ್ಲಿರುವ ಆ ಜಾಗದಲ್ಲಿ ಇಸ್ಲಾಮಿನ ಸ್ಟಾಲನ್ನು ಹಾಕಲಾಗಿದೆ ಎಂಬುದನ್ನು ನೋಡಿದಾಗ ಅವರು ಬಹಳ ಆಶ್ಚರ್ಯಚಕಿತರಾದರು. ಅವರು ನಮ್ಮ ಸ್ಟಾಲಿಗೆ ಬಂದು ಮಾತುಕತೆ ನಡೆಸಿದರು ಮತ್ತು ಬಹಳ ಸಂತೋಷಗೊಂಡು ಮರಳಿ ಹೋದರು. ಮರುದಿನ ಅವರು ಪುನಃ ಮರಳಿ ಬಂದರು. ಸ್ಟಾಲಿನಲ್ಲಿದ್ದ ಎಲ್ಲರಿಗಾಗಿ ಹಣ್ಣುಹಂಪಲು ಇತ್ಯಾದಿಗಳನ್ನು ತಂದಿದ್ದರು. ಪವಿತ್ರ ಖುರ್‌ಆನನ್ನು ನೋಡಿ ಅವರು ಬಹಳ ಸಂತೋಷಗೊಂಡರು. ಇಂದು ನನ್ನ ಜೀವಿತದ ಒಂದು ಕನಸನ್ನು ನೀವು ಈಡೇರಿಸಿದ್ದೀರಿ ಎಂದು ಪವಿತ್ರ ಖುರ್‌ಆನ್ ಖರೀದಿ ಮಾಡುವಾಗ ಅವರು ಹೇಳಿದರು.

ಅಹ್ಮದಿಯರಿಗೆ ಪಾಕಿಸ್ತಾನದಲ್ಲಿ ಅಂತಿಮ ಶರೀಅತ್ ಗ್ರಂಥವಾದ ಪವಿತ್ರ ಖುರ್‌ಆನನ್ನು ಪಾರಾಯಣ ಮಾಡುವುದನ್ನು, ಆಲಿಸುವುದನ್ನು, ಇರಿಸುವುದನ್ನು ಕೂಡ ನಿಷೇಧಿಸಲಾಗಿದೆ ಮತ್ತು ಅದು ಬಹಳ ದೊಡ್ಡ ಅಪರಾಧವಾಗಿ ಗಣಿಸಲಾಗುತ್ತದೆ. ಅದೇ ಗ್ರಂಥದ ಮೂಲಕ ಅಹ್ಮದಿಯಾ ಜಮಾಅತ್ ಲೋಕದಲ್ಲಿ ಇಸ್ಲಾಮಿನ ಸಂದೇಶವನ್ನು ತಲುಪಿಸುತ್ತಿದೆ ಮತ್ತು ಲೋಕದ ಸುಧಾರಣೆ ಮಾಡುತ್ತಿದೆ.

ಮೈಕ್ರೋನೇಶಿಯದ ಮುಬಲ್ಲಿಗ್ ಆದ ಶರ್‌ಜೀಲ್ ಸಾಹಿಬ್ ಹೇಳುತ್ತಾರೆ: ಕೆಲವು ಕಾಲಕ್ಕೆ ಮುಂಚೆ ಸೈಮನ್ ಗೇಡನ್ ಎಂಬ ಹೆಸರಿನ ಒಬ್ಬ ವ್ಯಕ್ತಿ ಜಮಾಅತನ್ನು ಸಂಪರ್ಕಿಸಿ ಪವಿತ್ರ ಖುರ್‌ಆನ್ ಪ್ರತಿಯನ್ನು ಪಡೆದುಕೊಂಡರು. ಸ್ವಲ್ಪ ಕಾಲ ಕಳೆದ ನಂತರ ಒಂದು ದಿನ ಅಚಾನಕ್ಕಾಗಿ ಅವರ ಮೆಸೇಜ್ ಬಂತು ಮತ್ತು ಭೇಟಿಯಾಗಲು ಬಯಸುತ್ತೇನೆ ಎಂದು ಹೇಳಿದರು. ಮಸೀದಿಗೆ ಬಂದಾಗ ಅವರು ಹೀಗೆ ಹೇಳಿದರು: ನಾನು ಜೀವನ ಪೂರ್ತಿ ಬೈಬಲನ್ನು ಬಹಳ ವಿಶದವಾಗಿ ಓದಿದ್ದೇನೆ. ಆದರೆ ಪರಿಶ್ರಮಪಟ್ಟು ಕೂಡ ಅದರ ಅಧ್ಯಾಪನೆ ಹೃದಯಕ್ಕೆ ಇಳಿಯುವುದಿಲ್ಲ. ಏನೂ ಗೊತ್ತಾಗುವುದಿಲ್ಲ. ಆದರೆ ಪವಿತ್ರ ಖುರ್‌ಆನನ್ನು ಓದಲು ಶುರುಮಾಡಿದಾಗ ಅದರ ಪ್ರತಿಯೊಂದು ಪದ ಹೃದಯದಲ್ಲಿ ನೇರವಾಗಿ ಪ್ರವೇಶಿಸುವಂತೆ ಅನುಭವವಾಗುತ್ತಿತ್ತು. ಜೀವನ ಪೂರ್ತಿ ನಾನು ಹೇಗೆ ತಪ್ಪು ಹಾದಿಯಲ್ಲಿದ್ದೆ ಮತ್ತು ಪವಿತ್ರ ಖುರ್‌ಆನಿನಿಂದ ದೂರವಿದ್ದೆ ಎಂದು ಯೋಚಿಸಿ ಅವರು ಬಹಳ ಆಶ್ಚರ್ಯಗೊಂಡಿದ್ದರು. ಈಗ ಅವರು ಜಮಾಅತಿನಲ್ಲಿ ಪ್ರವೇಶಿಸಿದರು ಎಂದು ಮಾತ್ರವಲ್ಲ, ಬಹಳ ಧೈರ್ಯದಿಂದ ಇಸ್ಲಾಮಿನ ತಬ್ಲೀಗನ್ನು ಮಾಡುತ್ತಾರೆ.

ಬುರ್ಕಿನಾಫಾಸೋ ಮಹ್‌ದಿಯಾಬಾದ್‌ನ ನಾಸಿರ್ ಸಈದ್ ವಜೀಕ ಸಾಹಿಬ್ ಹೇಳುತ್ತಾರೆ: ನಮ್ಮ ಗ್ರಾಮದ ಬಹುತೇಕರು ಅಹ್ಮದಿಯ್ಯತ್ ಸ್ವೀಕಾರ ಮಾಡಿದಾಗ ನನ್ನ ಒಬ್ಬ ಸ್ನೇಹಿತ ನನ್ನನ್ನು ಸೌದಿ ಅರೇಬಿಯಕ್ಕೆ ಕರೆದರು ಮತ್ತು ಕಅ್‌ಬ ಭವನವನ್ನು ತೋರಿಸುತ್ತಾ, ವಹಾಬಿಯಾಗಲು ಮತ್ತು ಅಹ್ಮದಿಯ್ಯತ್ ಉಪೇಕ್ಷಿಸಲು ಹೇಳಿದರು. ನಾನು ಹೇಳಿದೆ: ಅಹ್ಮದಿಯ್ಯತ್ ಬಿಡ ಬೇಕಾದಂತಹ ಸ್ಥಿತಿ ನನ್ನ ಬದುಕಿನಲ್ಲಿ ಎಂದೂ ಬರದಿರಲಿಕ್ಕಾಗಿ ಮತ್ತು ಅಂತಹ ಸ್ಥಿತಿ ಬರುವುದಕ್ಕೆ ಮುಂಚಿತವಾಗಿ ಸತ್ಯವಿಶ್ವಾಸದ ಅವಸ್ಥೆಯಲ್ಲಿ ನನಗೆ ಮೃತ್ಯು ನೀಡಲು ನಾನು ಈ ಪರಿಶುದ್ಧ ಸ್ಥಳದ ನೆರಳಿನಲ್ಲಿ ನಿಂತುಕೊಂಡು ದುಆ ಮಾಡುತ್ತೇನೆ. ಅವರ ಆ ಸ್ನೇಹಿತ ನಂತರ ಅವರನ್ನು ಭೇಟಿಯಾಗಲು ಬುರ್ಕಿನಾಫಾಸೋಗೆ ಮರಳಿ ಬಂದಾಗ ಅಲ್‌ಹಾಜ್ ಇಬ್ರಾಹೀಂ ಸಾಹಿಬ್‌ರು ಅವರನ್ನು ತಬ್ಲೀಗ್ ಮಾಡಿದರು ಮತ್ತು ಅವರು ಅಹ್ಮದಿಯಾದರು.

ನೈಜೀರಿಯದ ಒಬ್ಬ ನಿವಾಸಿಗೆ ಅಹ್ಮದಿಯ್ಯತ್ ಸ್ವೀಕಾರ ಮಾಡಲು ಸೌಭಾಗ್ಯ ಲಭಿಸಿತು. ಅದಕ್ಕಿಂತ ಮೊದಲು ಅವರು ವಿರೋಧಿ ಗುಂಪಿನ ಸಕ್ರಿಯ ಸದಸ್ಯರಾಗಿದ್ದರು. ಅಹ್ಮದಿಯ್ಯತ್ ಸ್ವೀಕಾರ ಮಾಡಿದ ನಂತರ ಕಠಿಣವಾದ ವಿರೋಧವನ್ನು ಅವರಿಗೆ ಎದುರಿಸಬೇಕಾಗಿ ಬಂತು. ಒಂದು ದಿನ ಅವರು ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ ತೀವ್ರವಾದ ಬಿರುಗಾಳಿ ಬೀಸಿತು. "ಒಂದು ದಿನ ನೀನು ಕೆಲಸದಿಂದ ಮರಳಿ ಬರುವಾಗ ನಿನ್ನ ಮನೆ

ಸರ್ವನಾಶವಾಗಿ ಇರುವುದನ್ನು ನೀನು ನೋಡುವೆ" ಎಂದು ವಿರೋಧಿಗಳು ಹೇಳಿದ್ದು ಆಗ ಅವರ ನೆನಪಿಗೆ ಬಂತು. ಅವರು ಹೀಗೆ ದುಆ ಮಾಡಿದರು: ಯಾ ಅಲ್ಲಾಹ್, ಇದು ನಿನ್ನ ಜಮಾಅತ್ ಆಗಿದ್ದರೆ ಮತ್ತು ಹಝ್ರತ್ ಪೈಗಂಬರ್(ಸ) ಸುವಾರ್ತೆ ನೀಡಿದ್ದ ವಾಗ್ದತ್ತ ಮಹ್‌ದಿ ಹಝ್ರತ್ ಮಸೀಹ್ ಮೌಊದ್(ಅ) ಆಗಿರುವರು ಎಂದಾದರೆ, ನನ್ನ ಮನೆ ಬಿದ್ದು ಹೋಗದಂತೆ ನೀನು ಕಾಪಾಡು. ಅವರು ಮರಳಿ ಬಂದಾಗ ಮನೆಯ ಪ್ರತಿಯೊಂದು ಕೊಠಡಿಗಳು ಸುರಕ್ಷಿತವಾಗಿ ಇರುವುದನ್ನು ಅವರು ಕಂಡರು. ಯಾವುದೇ ವಿಧದ ನಷ್ಟಗಳು ಆಗಿರಲಿಲ್ಲ. ಆದರೆ ಸುತ್ತಮುತ್ತಲಿನ ಎಲ್ಲ ಮನೆಗಳು ನಾಶವಾಗಿದ್ದುವು. ಇದು ದೈವಿಕ ಜಮಾಅತ್ ಎಂದು ಅವರಿಗೆ ದೃಢವಿಶ್ವಾಸವಾಯಿತು.

ಲೋಕದ ಅನೇಕ ಸ್ಥಳಗಳಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಅಲ್ಲಾಹನ ಸಹಾಯಗಳು ಕಂಡುಬರುತ್ತವೆ. ಅವರು ನಮಗೆ ನೈಜ ಇಸ್ಲಾಮಿನ ಪಾಠವನ್ನು ಕಲಿಸಿಕೊಟ್ಟರು. ಈ ಘಟನೆಗಳು ಅಹ್ಮದಿಯ್ಯತ್ತಿನ ಸತ್ಯತೆಗೆ ಪುರಾವೆಗಳಾಗಿವೆ. ಅವುಗಳು ಜನರ ವಿಶ್ವಾಸಗಳನ್ನು ಸುದೃಢಗೊಳಿಸುತ್ತಿವೆ. ಅಲ್ಲಾಹನು ಲೋಕದ ಕಣ್ಣುಗಳನ್ನು ತೆರೆಸಲಿ. ನಂಬಿಕೆ ಮತ್ತು ದೃಢವಿಶ್ವಾಸವನ್ನು ಸ್ವೀಕಾರ ಮಾಡಲು ಸೌಭಾಗ್ಯ ನೀಡಲಿ.

ಹುಝೂರ್ ಹೇಳಿದರು: ಈ ದಿನಗಳಲ್ಲಿ ಕೋವಿಡ್ ರೋಗ ಪುನಃ ಹರಡುತ್ತಿದೆ. ಜನರು ಮುನ್ನೆಚ್ಚರಿಕೆ ವಹಿಸಬೇಕು.

ಖುತ್ಬ ಜುಮಾದ ಕೊನೆಯಲ್ಲಿ ಹುಝೂರ್ ನಾಲ್ವರು ದಿವಂಗತರ ಬಗ್ಗೆ ಪ್ರಸ್ತಾಪಿಸಿಕೊಂಡು ಜುಮಾ ನಮಾಝ್ ನಂತರ ಅವರ ಜನಾಝ ಗ಼ಾಇಬ್ ನಿರ್ವಹಿಸುವುದಾಗಿ ಹೇಳಿದರು.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*(atba)**

*At, **'Masjid Mubarak',** Islamabad, Tilford, UK.* On 11-08-2023

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon